18	ಮುಜಾವರ ಇನಾಂ	102–07
19	ಫಕೀರ್ ಇನಾಂ	54–00
20	ಚಾಥಾಯಿ ಇನಾಂ	53–26
21	ಗುರುನಾಥ್ ಅಪ್ಪಯ್ಯ ಹರಿದಾಸ	81–00
22	ತಿಜಾಯಿ ಇನಾಂ	19–32
	ಒಟ್ಟು	**2177–29**

(ಆ) ಈ ಇನಾಂ ಜಮೀನುಗಳಲ್ಲಿ

1) ಬಸ್ ನಿಲ್ದಾಣಕ್ಕೆ ಸರ್ವೇ ನಂ3ರಲ್ಲಿ 2–00 ಎಕರೆ

2) ಪ್ರೌಢ ಶಾಲೆಗೆ ಸರ್ವೇ ನಂ 3 ರಲ್ಲಿ 2–10 ಎಕರೆ.

3) ತಹಸೀಲ್ದಾರ್ ಕಾರ್ಯಾಲಯಕ್ಕೆ ಸರ್ವೇ ನಂ 3 ರಲ್ಲಿ 00.30 ಗುಂಟೆ,

4) ಸರ್ವೇ ನಂ 4 ರಲ್ಲಿ 2–20 ಎಕರೆ ಜಮೀನು, ಹೀಗೆ ಒಟ್ಟು 7 ಎಕರೆ–20 ಗುಂಟೆ ಜಮೀನು ಸ್ವಾಧೀನ ಪಡಿಸಿಕೊಳ್ಳಲಾಗಿದೆ.

(ಇ) ಈ ಕಟ್ಟಡಗಳ ಆವರಣಗಳಲ್ಲಿ ಯಾವುದೇ ಅನಧಿಕೃತ ಶೆಡ್‌ಗಳು ನಿರ್ಮಾಣವಾಗಿರುವುದಿಲ್ಲ.

ರೇಷ್ಮೆ ಗೂಡು ಮಾರುಕಟ್ಟೆಯಲ್ಲಿನ ಭ್ರಷ್ಟಾಚಾರ

416. ಶ್ರೀ ವಿ. ಸೋಮಣ್ಣ :– ಮಾನ್ಯ ರೇಷ್ಮೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿ ರೇಷ್ಮೆ ಗೂಡು ಮಾರುಕಟ್ಟೆಗಳ ಸಂಖ್ಯೆ ಎಷ್ಟು;

(ಆ) ಈ ಮಾರುಕಟ್ಟೆಗಳಲ್ಲಿ ತೂಕ ಮತ್ತು ಅಳತೆ, ಹರಾಜು ಕೂಗುವುದರಲ್ಲಿ ಭ್ರಷ್ಟಾಚಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ಇದರಿಂದ ರೈತರಿಗೆ ನಷ್ಟವಾಗುವುದಿಲ್ಲವೇ;

(ಈ) ಇದನ್ನು ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್. ಶಿವಣ್ಣ (ಮಾನ್ಯ ರೇಷ್ಮೆ ಸಚಿವರು)

(ಅ) ರಾಜ್ಯದಲ್ಲಿ 66 ರೇಷ್ಮೆ ಗೂಡು ಮಾರುಕಟ್ಟೆಗಳನ್ನು ಸ್ಥಾಪಿಸಿದ್ದು, ಅದರಲ್ಲಿ 53 ಮಾರುಕಟ್ಟೆಗಳಲ್ಲಿ ವಹಿವಾಟು ನಡೆಯುತ್ತಿದೆ.

(ಆ) ಮಾರುಕಟ್ಟೆಗಳಲ್ಲಿ ತೂಕ ಮಾಡಲು ಎಲೆಕ್ಟ್ರಾನಿಕ್ಸ್ ತೂಕದ ಯಂತ್ರಗಳು ಪ್ಲಾಸ್ಟಿಕ್ ಕ್ರೇಟ್‌ಗಳನ್ನು ನೀಡಿ ತೂಕದಲ್ಲಿ ವ್ಯತ್ಯಾಸಗಳಾಗದಂತೆ ಎಚ್ಚರಿಕೆ ವಹಿಸಲಾಗಿದೆ. ಹರಾಜು ಕೂಗಿದ ನಂತರ ಕೂಡಲೇ ದರ ಒಪ್ಪಿಗೆ ಬಗ್ಗೆ ರೈತರ ಒಪ್ಪಿಗೆ ಪಡೆಯಲು ಅವರಿಂದ ದೃಢೀಕರಣ ಪಡೆಯುವ ವಿಧಾನ ಅನುಸರಿಸಿ ರೈತರಿಗೆ ಯಾವುದೇ ತೊಂದರೆಗಳಾಗದಂತೆ ಎಚ್ಚರಿಕೆ ವಹಿಸಲಾಗುತ್ತಿದೆ.

(ಇ) ರೈತರಿಗೆ ನಷ್ಟವಾಗದಂತೆ ಎಚ್ಚರಿಕೆ ವಹಿಸಲಾಗಿದೆ. ತೂಕದಲ್ಲಿ ವ್ಯತ್ಯಾಸಗಳು ಕಂಡು ಬಂದಲ್ಲಿ ತೂಕ ಮಾಡಿದ ಸಿಬ್ಬಂದಿಯ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲಾಗುತ್ತಿದೆ.

(ಈ) ಮಾರುಕಟ್ಟೆಗಳಲ್ಲಿ ನಿಖರವಾದ ತೂಕಕ್ಕಾಗಿ ಎಲೆಕ್ಟ್ರಾನಿಕ್ ತೂಕದ ಯಂತ್ರಗಳನ್ನು ಸರಬರಾಜು ಮಾಡಲಾಗಿದೆ. ಮಾರುಕಟ್ಟೆಗಳ ಸುಗಮ ಮತ್ತು ದಕ್ಷ ಕಾರ್ಯನಿರ್ವಹಣೆಗಾಗಿ ಕರ್ನಾಟಕ ರೇಷ್ಮೆ ಹುಳುವಿನ ಬಿತ್ತನೆ ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ, ಸರಬರಾಜು, ವಿತರಣೆ ಮತ್ತು ಮಾರಾಟ ನಿಯಂತ್ರಣ) ಕಾಯಿದೆ 1959 ಮತ್ತು ನಿಯಮಾವಳಿ 1960 ರನ್ವಯ ಕಾಲಕಾಲಕ್ಕೆ ಸುತ್ತೋಲೆ ಸೂಚನೆಗಳನ್ನು ನೀಡಲಾಗುತ್ತಿದೆ. ಮಾರುಕಟ್ಟೆ ಅಧಿಕಾರಿಗಳಿಗೆ, ಪ್ರತ್ಯೇಕ ಸಭೆ ಏರ್ಪಡಿಸಿ, ಮಾರುಕಟ್ಟೆಗಳ ವಹಿವಾಟಿನ ಬಗ್ಗೆ ವಿಶ್ಲೇಷಣೆ ಮಾಡಿ ಸೂಕ್ತ ಸೂಚನೆಗಳನ್ನು ನೀಡಲಾಗಿರುತ್ತದೆ. ಸಿಬ್ಬಂದಿಗಳ ಮೇಲೆ ದೂರುಗಳು ಬಂದಲ್ಲಿ ಅದನ್ನು ಪರಿಶೀಲಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಅನಿರೀಕ್ಷಿತ ಭೇಟಿ ನಿಡಿ ಮಾರುಕಟ್ಟೆಗಳ ಪರಿಶೀಲನೆ ನಡೆಸಿ ಅವ್ಯವಹಾರಗಳು ಕಂಡುಬಂದಲ್ಲಿ ಸೂಕ್ತ ಶಿಸ್ತಿನ ಕ್ರಮ ಕೈಗೊಳ್ಳಲಾಗುತ್ತಿದೆ. ಶೀಘ್ರ ಮತ್ತು ಪಾರದರ್ಶಕ ವಹಿವಾಟು ನಡೆಸಲು ಪ್ರಮುಖ ಮಾರುಕಟ್ಟೆಗಳಲ್ಲಿ ಮಾರುಕಟ್ಟೆ ವಹಿವಾಟನ್ನು ಕಂಪ್ಯೂಟರೀಕರಿಸಲು ಯೋಚಿಸಲಾಗಿದೆ.

ಚಿಂತಾಮಣಿ ತಾಲ್ಲೂಕಿನ ರೇಷ್ಮೆ ಇಲಾಖೆಯ ಸಿ.ಡಿ.ಪಿ ಮತ್ತು ರೇಷ್ಮೆ ವರದಾನ ಯೋಜನೆ.

782. ಶ್ರೀ ಸುಧಾಕರ್ ಎಂ.ಸಿ :– ಮಾನ್ಯ ರೇಷ್ಮೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಚಿಂತಾಮಣಿ ತಾಲ್ಲುಕಿನ ರೇಷ್ಮೆ ಬೆಳೆಗಾರರಿಗೆ 2006–2007ನೇ ಸಾಲಿನ ಸಿ.ಡಿ.ಪಿ. ಮತ್ತು ರೇಷ್ಮೆ ವರದಾನ ಕಾರ್ಯಕ್ರಮಗಳ ಯೋಜನೆಯಡಿಯಲ್ಲಿ ಪ್ರಗತಿಯಾಗಿರುವ ಬಗ್ಗೆ ಪೂರ್ಣ ವಿವರಗಳನ್ನು ನೀಡುವುದು;

(ಆ) ಹಾಗಿದ್ದಲ್ಲಿ ಈ ಸಿ.ಡಿ.ಪಿ ಯೋಜನೆಯಡಿಯಲ್ಲಿ ರೈತರಿಗೆ ಎಷ್ಟು ಹಣ ವಿತರಣೆಯಾಗಿದೆ ಹಾಗೂ ಉಳಿದ ಹಣ ಎಷ್ಟು;

(ಇ) ಈ ಉಳಿಕೆ ಹಣವನ್ನು ರೈತರಿಗೆ ವಿತರಿಸಲು ಯಾವ ಕ್ರಮ ಜರುಗಿಸಲಾಗುವುದು?